**ದಿಃ20-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ ವಾದಿಯ ಪರ ವಕೀಲರಿಂದಃ**

ಈ ದಿನ ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿರುವ ಸಂಗತಿಗಳೆಲ್ಲವೂ ನಿಜವಿದ್ದು ಸಹಿ ಸಹ ನನ್ನದೆ ಇರುತ್ತದೆ.

ಈ ಕೇಸಿಗೆ ಸಂಬಂಧಪಟ್ಟ ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ದಿಃ28.08.1939 ರ ದೃಢಿಕೃತ ಕ್ರಯ ಪತ್ರ ಹಾಜರು ಪಡಿಸಿದ್ದು ಅದನ್ನು **ನಿ.ಪಿ.1** ಎಂದು ಗುರುತಿಸಲಾಯಿತು. ದಿಃ12.01.2017 ರ ದೃಢಿಕೃತ ಕ್ರಯ ಪತ್ರ ಹಾಜರು ಪಡಿಸಿದ್ದು, ಅದರ ಮೂಲ ಪ್ರತಿಯನ್ನು ಸಾಲ ಪಡೆಯುವ ಉದ್ದೇಶಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದ್ದರಿಂದ ಸದರಿ ದೃಢಿಕೃತ ಕ್ರಯ ಪತ್ರವನ್ನು **ನಿ.ಪಿ.2** ಎಂದು ಗುರುತಿಸಲಾಯಿತು. ದಿಃ05.09.2012 ರ ದೃಢಿಕೃತ ವಿಭಾಗ ಪತ್ರ ಹಾಜರು ಪಡಿಸಿದ್ದು ಅದನ್ನು **ನಿ.ಪಿ.3** ಎಂದು ಗುರುತಿಸಲಾಯಿತು. ಒಎಸ್ ನಂ.5364/2006 ರ ದೃಢಿಕೃತ ತೀರ್ಪು ಮತ್ತು ಡಿಕ್ರಿ ಹಾಜರು ಪಡಿಸಿದ್ದು ಅವುಗಳನ್ನು **ನಿ.ಪಿ.4 ಮತ್ತು 5** ಎಂದು ಗುರುತಿಸಲಾಯಿತು. ಒಎಸ್.ನಂ.5950/2021 ರ ದಾವೆಯಲ್ಲಿ ಸಲ್ಲಿಸಿದ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮ ಆದೇಶ 39 ನಿಯಮ 1 ಮತ್ತು 2 ರಲ್ಲಿ ಸಲ್ಲಿಸಿದ ದೃಢಿಕೃತ ಮಧ್ಯಂತರ ಅರ್ಜಿ ಹಾಜರು ಪಡಿಸಿದ್ದು ಅದನ್ನು **ನಿ.ಪಿ.6** ಎಂದು ಗುರುತಿಸಲಾಯಿತು. ಸದರಿ ಮಧ್ಯಂತರ ಅರ್ಜಿಯ ಮೇಲೆ ಆದ ಆದೇಶದ ದೃಢಿಕೃತ ನಕಲು ಹಾಜರು ಪಡಿಸಿದ್ದು ಅದನ್ನು **ನಿ.ಪಿ.7** ಎಂದು ಗುರುತಿಸಲಾಯಿತು. ಬಿಬಿಎಂಪಿ ಅವರು ನೀಡಿದ ದಿಃ22.02.2016 ರ ಉತ್ತರ ಪತ್ರ ಹಾಜರು ಪಡಿಸಿದ್ದು ಅದನ್ನು **ನಿ.ಪಿ.8** ಎಂದು ಗುರುತಿಸಲಾಯಿತು. ಖಾತಾ ದೃಢೀಕರಣ ಪತ್ರ ಮತ್ತು ಖಾತಾ ನಕಲುಗಳನ್ನು ಹಾಜರು ಪಡಿಸಿದ್ದು ಅವುಗಳನ್ನು **ನಿ.ಪಿ.9 ಮತ್ತು 10** ಎಂದು ಗುರುತಿಸಲಾಯಿತು. ಋಣಬಾರ ರಹಿತ ಪ್ರಮಾಣ ಪತ್ರ ಹಾಜರು ಪಡಿಸಿದ್ದು ಅದನ್ನು **ನಿ.ಪಿ.11** ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ವಾದಿಯ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೇಳಿದ್ದು, ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಲಯದಲ್ಲಿ ಬೆರಳಚ್ಚುಗಾರರು ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಸಾಕ್ಷ್ಯವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**(ಚಂದ್ರಶೇಖರ ಪಿ.ಎಸ್.)**
**25 ನೇ ಅಪರ ನಗರ ಸಿವಿಲ್ ನ್ಯಾಯಾಧೀಶರು**
**ಬೆಂಗಳೂರು.**

This is a True Copy of the Court Records Online. Authenticated @ districts.ecourts.gov.in/cnr/KABC010070502023/truecopy/order-1.pdf

www.ecourtsindia.com